ಅಂತಾನೇ ಇಟ್ಕೊ, ನಾವು ನಾಲ್ಕೈದು ಜನ ಅಣ್ಣ ತಮ್ಮಂದಿರು  ಎರಡು ಎಕರೆ ಭೂಮಿಯನ್ನು ನಂಬಿಕೊಂಡು ನೆಮ್ಮದಿಯಾಗಿರಲಿಕ್ಕೆ ಸಾಧ್ಯಾನಾ?  ಪಾಲು ಹಂಚಿದರೆ ಒಬ್ಬೊಬ್ಬರಿಗೆ ಎಷ್ಟು ಬರುತ್ತೆ ಅಂದ್ಕೊಂಡಿದ್ದಿ? ಅಲ್ಲದೆ, ನಮ್ಮ ನೆರವಂಡ ಕುಟುಂಬ ನೀನು ಕೇಳಿಲ್ವಾ? ದೇಶ ಸೇವೆಗಾಗಿ ಪ್ರತೀ ತಲೆಮಾರಿನ ಒಬ್ಬನಾದರೂ ಸೈನ್ಯಕ್ಕೆ ಸೇರುವುದು ರಕ್ತಗತವೆಂಬಂತೆ ಸಂಪ್ರದಾಯವಾಗಿ ಬೆಳೆದು ಬಂದು ಬಿಟ್ಟಿದೆ. ನಮ್ಮ ಮುತ್ತಾತನ ಅಪ್ಪ ಬ್ರಿಟೀಷರ ಕಾಲದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು, ಮಕ್ಕಳ ಪಠ್ಯ ಪುಸ್ತಕದಲ್ಲಿ ವ್ಯಕ್ತಿ ಪರಿಚಯವಾಗಿ ಬಂದಿದ್ದು ನೀನೂ ಓದಿರಬಹುದಲ್ವಾ?'

'ಅದರ ಪ್ರಯೋಜನ ಇಷ್ಟೇ. ತುತ್ತು ಕೂಳಿಗೂ ಬೆವರು ಸುರಿಸಲೇ ಬೇಕು....' ಅವಳ ಮಾತಿನಲಿ ವ್ಯಂಗ್ಯವಿತ್ತು.

'ಎಷ್ಟೋ ತಲೆಮಾರಿನ ನಂತರದ ನಾವು ಸವಲತ್ತುಗಳನ್ನು ನಿರೀಕ್ಷಿಸುವದು ಸಾಧ್ಯಾನಾ? ಸೈನ್ಯಕ್ಕೆ ಸೇರುವುದು ದೇಶ ಸೇವೆಯೊಂದಿಗೆ ನಮ್ಮ ಜೀವನ ಮಟ್ಟವನ್ನು ಸುಧಾರಿಸುತ್ತೆ. ಇಲ್ಲದಿದ್ದರೆ ವೀರಮರಣವಂತೂ....'

ಮುಂದೆ ಮಾತನಾಡಲು ಬಿಡದೆ ಬಾಯನ್ನು ಕೈಯಿಂದ ಮುಚ್ಚಿದ್ದಳು.

ಮದುವೆಯಾದ ಹೊಸತರಲ್ಲಿ 'ಏಕಾಂತದಲ್ಲಿರುವಾಗ' ನನ್ನ ಪಾಲಿಗೆ ಇಂತಹುದೇ ಮಾತುಗಳಾ? ಅವಳ ಮಾತುಗಳಲ್ಲಿ ನೋವಿತ್ತು. ನಿರಾಶೆ ಇತ್ತು.

'ಸಾರಿ, ನೀನು ನನ್ನ ಮನದನ್ನೆ ಚಿನ್ನಾ..ಈಗ ಮಾತಿಲ್ಲ, ಕೆಲಸ ಮಾತ್ರ....'

ಕ್ಷಣ ಮಾತ್ರದಲ್ಲಿ ಆತನ ಬಾಹುಗಳು ಶಾಂತಿಯನ್ನು ಬಳಸಿದ್ದವು.

ನಿದ್ರಿಸಿದ್ದ ಬಿನ್ನು ಕೊಂಚ ಕೊಸರಾಡಿದ. ಮುಸ್ಸಂಜೆ ಕವಿಯುತ್ತಿತ್ತು.

'ಬಿನ್ನು ಏಳು, ಹೋಂ ವರ್ಕ್ ಮಾಡಿ ಊಟ ಮಾಡಿ ಮಲಕ್ಕೊ' ಎಂದು ಎಬ್ಬಿಸಲು ಪ್ರಯತ್ನಿಸಿದಳು. ಆಟವಾಡಿ ಏಟು ತಿಂದು ಸುಸ್ತಾಗಿದ್ದ ಮಗು  ಸುಖ ನಿದ್ರೆಯಲ್ಲಿತ್ತು.

`ಅಮ್ಮಾ, ಬಾಳೆದಿಂಡು, ಗೊನೆ, ಪುಂಬೆ ಎಲ್ಲ ಬಂತು' ಆಳು ಮಾದ ಹೆಗಲಿನಿಂದ ಹೊರೆ ಇಳಿಸುತ್ತಾ ನುಡಿದ.

'ಇಷ್ಟೇ ಇದ್ದಿದ್ದಾ? ತೋಟವನ್ನೆಲ್ಲ ಸರಿಯಾಗಿ ನೋಡಿದ್ದಿ ತಾನೆ?'

'ನೋಡ್ದೆ ಅಮ್ಮ, ಇನ್ನೊಂದು ಗೊನೆ ನಿಮ್ಮ ಮೈದ ತೊಗೊಂಡು ಹೋದ್ರು'

'ಕೆಟ್ಟ ಜನ, ನಾನು ನಿನಗೆ ಎಷ್ಟು ಸಲ ಹೇಳಿಲ್ಲ, ಬೇಲಿ ಹಾಕು ಅಂತ?'

'ಹುತ್ತರಿ ನಮ್ಮೆ ಆಗ್ಲಿ, ತಕ್ಷಣ ಮಾಡುತ್ತೇನೆ......ಈಗ ನಂಗೆ ಸ್ವಲ್ಪ ಕಾಸು ಬೇಕಾಗಿತ್ತು...' ತಲೆ ಕೆರೆದುಕೊಳ್ಳುತ್ತಾ  ಕೇಳಿದ.

ಆತನಿಗೆ ಕಾಸು ಕಾಫಿ ಕೊಟ್ಟು ಕಳುಹಿಸಿದಳು.

ಮೈದುನ ತನ್ನ ತೋಟದ ಗೊನೆ ಕಿತ್ತುದು ಮನದಲ್ಲಿ ಕೊರೆಯುತ್ತಿತ್ತು.

ನಾಡಿದ್ದು ಹುತ್ತರಿ ಹಬ್ಬ.......ಓಹ್...ರಾಯ್ ಒಡನೆ ತಾನು ಸಂಭ್ರಮಿಸುತ್ತಿದ್ದ ದಿನಗಳವು. ಮೈದುನರು, ಅತ್ತೆ ಮಾವ, ಎಲ್ಲರೂ ಒಟ್ಟಾಗಿ ಇದ್ದ ಸಮಯ.

ತನ್ನ ಒತ್ತಾಯಕ್ಕೆ ಮಣಿಯದೆ ರಾಯ್ ಮಿಲಿಟರಿ ಸೇರಿದ್ದ. ಹಿಂದಿನ ರಾತ್ರಿ ಇಬ್ಬರೂ ನಿದ್ರಿಸಿರಲಿಲ್ಲ. ಶಾಂತಿ ಆತನಿಗೆ ಬೆನ್ನು ಮಾಡಿ ಮಲಗಿದ್ದಳು. ಕತ್ತಲೆಯ ಮೌನದಲ್ಲಿ, ಮನದ ಕತ್ತಲೆಯ ನಡುವೆ ಆಗಾಗ ಬಿಕ್ಕುವಿಕೆ ಕೇಳುತ್ತಿತ್ತು. ರಾಯ್ ಉಕ್ಕಿ ಬರುತ್ತಿದ್ದ ದುಃಖವನ್ನು ನುಂಗಿಕೊಳ್ಳುತ್ತಿದ್ದ. ಮದುವೆಯಾಗಿ 6 ತಿಂಗಳಾಗಿತ್ತು. ದಾಂಪತ್ಯದ ಮಧುರ ಅನುಭವವನ್ನು ಕಳಚಿಕೊಂಡು ದೂರ ಹೋಗಲು ಮನಸ್ಸು ಹಿಂಜರಿಯುತ್ತಿತ್ತು.

## ಕಾಣದ ಕೈ

ಸಂಸಾರ ಬಂಡಿಯ
ನೊಗವ ಹೊರುವರು
ಹೆಣ್ಣು ಗಂಡು;
ಹಗ್ಗ ಹಿಡಿದು, ಚಾಟಿ ಬೀಸಿ
ಮುನ್ನಡೆಸುವುದು
ಕಾಣದ ಕೈಯೊಂದು!

★ ಕೆ.ಬಿ.ರಂಗಸ್ವಾಮಿ




ಆದರೆ ದೊಡ್ಡ ಸಂಸಾರದ ಆ ಪುಟ್ಟ ಮನೆಯಲ್ಲಿ ಎಷ್ಟೋ ವೇಳೆ ಅವರ ಏಕಾಂತಕ್ಕೂ ಆಸ್ಪದವಾಗುತ್ತಿರಲಿಲ್ಲ. ಬಾಗಿಲಿಲ್ಲದ, ಕೋಣೆ ಎನಿಸಿದ್ದ ಆ ನಾಲ್ಕು ಗೋಡೆಗೇ ಸೀರೆಯ ಪರದೆ ಇಳಿ ಬಿಟ್ಟಿದ್ದರು.

ತಾನು ಸೈನ್ಯ ಸೇರಿದರೆ ಮನೆಯ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಿಸಬಹುದಾದ ಬಯಕೆ ಆತನಲ್ಲಿ ಸ್ವಲ್ಪ ಸಮಾಧಾನ ತಂದಿತ್ತು.

'ಸ್ವಲ್ಪ ವರ್ಷ ಚಿನ್ನ, ಆಮೇಲೆ ಮನೆ ಕಟ್ಟಿಸಿಕೊಂಡು ಹಾಯಾಗಿರೋಣ. ನನ್ನ ತಮ್ಮಂದಿರು, ಅಪ್ಪ, ಅಮ್ಮನ ಜೊತೆ ಹೊಂದಿಕೊಂಡು ಹೋಗು'

ಅಪ್ಪ, ಅಮ್ಮನಿಗೆ ನಮಸ್ಕರಿಸಿದ. ಮೈದಡವಿ 'ಕಾವೇರಮ್ಮೆ ತಾಯಿಯ ಆಶೀರ್ವಾದ ನಿನ್ನ ಮೇಲಿರಲಿ ಮಗು...' ಎಂದು ಗದ್ಗದಿತರಾಗಿದ್ದರು. ತಮ್ಮಂದಿರು ಪೆಚ್ಚು ಮೋರೆ ಹಾಕಿ ನಿಂತಿದ್ದರು.

ಶಾಂತಿ ಹೊರಗೆ ಬಂದರೆ ದುಃಖ ಆಸ್ಫೋಟಿಸುವ ಭಯದಿಂದ ಒಳಗೇ ಉಳಿದಿದ್ದಳು. ಮೆಟ್ಟಲಿಳಿಯುವವರೆಗೂ ಕಾಯುತ್ತಿದ್ದ ಆತ ಕೊನೆಗೆ ಕೋಣೆಗೆ ಹೋಗಿ ಆಕೆಯ ಹಣೆ ನೇವರಿಸಿ ಸಿಹಿ ಮುತ್ತನಿಕ್ಕಿ ಹೊರ ಬಂದ. ಹೃದಯಸ್ಪರ್ಶಿ ಬೀಳ್ಕೊಡುಗೆಯಿಂದ ಗಂಟಲುಬ್ಬಿ ಬಂದು ಮಾತು ಹೊರಡದಾಗಿತ್ತು.

ಹೊಸತರಲ್ಲಿ ವಾರಕ್ಕೊಂದು ಪತ್ರ ರವಾನೆಯಾಗುತ್ತಿತ್ತು.

'ಇಲ್ಲಿ ವ್ಯವಸ್ಥೆಗಳು ತುಂಬಾ ಚೆನ್ನಾಗಿವೆ. ನಮ್ಮಲ್ಲಿಗಿಂತ ಪೌಷ್ಟಿಕ ಆಹಾರ ಕೊಡುತ್ತಾರೆ. ಆದರೆ ಶಿಸ್ತು ಬಹಳ. ಬೆಳಗ್ಗಿನ ಸಿಹಿ ನಿದ್ರೆಯಲ್ಲಿ ನಿನ್ನೊಂದಿಗೆ ರಮಿಸುವ ಕನಸು ಕಾಣುತ್ತಿದ್ದರೆ, ಕವಾಯತಿಗಾಗಿ ಎಬ್ಬಿಸಿ ಬಿಡುತ್ತಾರೆ. ನಿನ್ನ ಕೋಮಲ ಶರೀರವೆಲ್ಲಿ? ಕಠಿಣ ಪರಿಶ್ರಮ, ವ್ಯಾಯಾಮಗಳೆಲ್ಲಿ?'

'ಶಾಂತಿ, ಬಹಳ ಸಾರಿ ಓಡಿ ಬಂದು ಬಿಡೋಣ ಅಂತ ಅನ್ನಿಸುತ್ತೆ. ನಿನ್ನ ಮಧುರ ದನಿಯ ಗುಂಗಿನಲ್ಲಿದ್ದಾಗ, ಅಧಿಕಾರಿಯ ಗಡಸು ದನಿ ಬೆಚ್ಚಿ ಬೀಳಿಸುತ್ತದೆ. ಇಲ್ಲಿ ಹೊಟ್ಟೆ ತುಂಬಾ ಮಾಂಸಾಹಾರವನ್ನೇ ಉಣ್ಣುತ್ತಿದ್ದರೂ, ಅಲ್ಲಿ ಹಂಚಿ ತಿನ್ನುತ್ತಿದ್ದ ಅಮ್ಮನ ಕೈ ತುತ್ತಿನ ನೆನಪು ಕಾಡುತ್ತದೆ.'

'ಎಲ್ಲಕ್ಕಿಂತ ಹೆಚ್ಚಾಗಿ ಶಾಂತಿ, ನಿನ್ನ ಪ್ರೇಮ, ಪ್ರೀತಿಯಿಂದ  ಆವೃತನಾಗಿದ್ದ ನಾನು ಮರಳುಗಾಡಿನಲ್ಲಿ ಬಿಟ್ಟ ಒಂಟಿ ಬಡುಕನಾಗಿಬಿಟ್ಟಿದ್ದೇನೆ. ಜೋಡಿ ಹಕ್ಕಿಗಳ ಮಿಲನ ನನ್ನ ನಿದ್ದೆಯನ್ನು ಕೆಡಿಸುತ್ತಿದೆ...'

ಅವಳು ಉತ್ತರಿಸುತ್ತಿದ್ದಳು.

'ರಾಯ್, ನಿನಗಾದರೂ ಹೊಸ ಬದುಕು ಬದಲಾವಣೆ ಇದೆ. ಕೊಂಚವಾದರೂ ನನ್ನ ನೆನಪಿನಿಂದ ದೂರವಿರುತ್ತೀ. ಆದರೆ ನಂಗೆ...? ಅದೇ ಮನೆ, ಅದೇ ತೋಟ, ಅದೇ ಗದ್ದೆ...ಅತ್ತೆ... ಮಾವ ಮೈದುನರು...ಅದೇ ಮಾತುಗಳು. ಅದರ ನಡುವೆ ಎಲ್ಲ ನೀನೇ ಕಾಣುತ್ತೀ.... ನಿನ್ನದೇ ಗುಂಗು... ನಿದ್ರೆಯಿಲ್ಲದ ನೀರಸ ರಾತ್ರಿಗಳು... ಯಾರಿಗೂ ಬಾರದಿರಲಿ ಈ ವಿರಹ ವೇದನೆ'.

ಫೋನ್ ರಿಂಗಾಯಿತು. ಅತ್ತಲಿಂದ ಅಮ್ಮನ ದನಿ.

'ಶಾಂತಿ, ಹುತ್ತರಿಗೆ ಬಂದು ಬಿಡು ಮಗು'

'ಇಲ್ಲಮ್ಮಾ, ನಾನು ಬರೊಲ್ಲ'

'ಬಾ ಮಗು, ಜೊತೇಲಿ ಹಬ್ಬ ಮಾಡೋಣ. ಪುಟ್ಟ ಮಗುವಿನ ಜೊತೆಯಲ್ಲಿ ಒಬ್ಬಳೇ ಏನು ಮಾಡ್ತೀ?'

'ಏನಾದ್ರೂ ಮಾಡ್ತೀನಿ' ಮುಂದೆ ಮಾತಿಗೆ ಅವಕಾಶ ಕೊಡದೆ ರಿಸೀವರನ್ನು ಕುಕ್ಕಿದಳು.

ಯಾಕೋ ಯಾರೂ ಬೇಡವೆನಿಸಿದೆ. ಅಮ್ಮನೊಡನೆ ಅಷ್ಟು ಕಠಿಣವಾಗಿ ಮಾತನಾಡಬಾರದಿತ್ತೋ ಏನೋ!

ಸದಾ ಕತ್ತಿಯ ಅಲುಗಿನ ಮೇಲೆ ನಡೆಯುವಂತಹ ಭೀತಿಯ ನಡುವೆಯೇ ಬದುಕಬೇಕಾದ ಈ ಮದುವೆ ತನಗೆ ಬೇಕಿತ್ತೇ? ಎಸ್.ಎಸ್.ಎಲ್.ಸಿಗೇ ಓದು ನಿಲ್ಲಿಸಿ ತೋಟ, ಮನೆ ಚಾಕರಿಯಲ್ಲಿ ಹೆತ್ತವರಿಗೆ ಕೈ ಜೋಡಿಸುತ್ತಿದ್ದ ತನಗೆ ಆಯ್ಕೆಯ ಸ್ವಾತಂತ್ರ್ಯವಾದರೂ ಎಲ್ಲಿತ್ತು? ಅದೆಲ್ಲ ಸಿರಿವಂತರ ಕುಟುಂಬಗಳಲ್ಲಿ!

ಬಿನ್ನು ಊಟಕ್ಕೆ ಏಳಲೇ ಇಲ್ಲ. ಶಾಂತಿಗೂ ಊಟ ಮಾಡಬೇಕೆನಿಸಲಿಲ್ಲ. ಮಗುವನ್ನು ಎದೆಗವಚಿಕೊಂಡು ನಿದ್ರಿಸಲು ಪ್ರಯತ್ನಿಸಿದಳು.

ನಾಳೆ ಟೌನ್ ಗೆ ಹೋಗಿ ಬಿನ್ನುಗೆ ಹಬ್ಬಕ್ಕೆ ಹೊಸ ಬಟ್ಟೆ ತರಬೇಕು ಎಂದುಕೊಂಡಳು.

ರಾಯ್ ಪ್ರತೀ ವರ್ಷ ಹುತ್ತರಿ ಸಮಯಕ್ಕೆ ಸರಿಯಾಗಿ  ರಜೆ ಹಾಕಿ ಬಂದರೆ ಎರಡು ತಿಂಗಳು ಉಳಿದು ಹೋಗುತ್ತಿದ್ದ. ಮನೆಯವರಿಗೆಲ್ಲ ಬಟ್ಟೆ ಖರೀದಿಗಾಗಿ ಮೊದಲೇ ಹಣ ಕಳುಹಿಸಿಬಿಡುತ್ತಿದ್ದ. ಉಳಿದವರೆಲ್ಲರೂ ಮೊದಲೇ ಖರೀದಿಸಿ